## 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.747/2022

ಚಾಸಾ:1 ಫ್ರಾಸಾ:1

ದಿನಾಂಕಃ 14.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು- ಕುಮಾರಿ

ತಂದೆಯ ಹೆಸರು- ವೆಂಕಟಸ್ವಾಮಿ

ವಯಸ್ಸು - 60 ವರ್ಷ

ಉದ್ಯೋಗ- ಆಡಳಿತ ಅಧಿಕಾರಿ, ಕೋಟಿಲಿಂಗೇಶ್ವರ ದೇವಸ್ಥಾನ

ವಾಸ- ಕಾಮಸಂದ್ರ

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ಚಾಸಾ-2 ರಿಂದ 8 ರವರು ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು. ದಿ.13.02.2021 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಆರೋಪಿಗಳು ದೇವಸ್ಥಾನದ ಆವರಣದಲ್ಲಿರುವ ಕೊಠಡಿ ಸಂಖ್ಯೆ 49 ಮತ್ತು 50 ಕ್ಕೆ ಅಕ್ರಮ ಪ್ರವೇಶ ಮಾಡಿ ಅವರುಗಳ ಸಾಮಾನುಗಳನ್ನು ಹಾಕಿ ಗೋಡೆಗಳಿಗೆ ಮೊಳೆಗಳನ್ನು ಹೊಡೆದು ಹಾನಿ ಮಾಡಿದ್ದು ಈ ಬಗ್ಗೆ ಚಾಸಾ-2 ರಿಂದ 5 ರವರು ವಿಚಾರಿಸಲಾಗಿ ಆರೋಪಿಗಳು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಾನು ಆ ದಿನ ಊರಿನಲ್ಲಿ ಇರಲಿಲ್ಲ. ಈ ಬಗ್ಗೆ ನನಗೆ ಚಾಸಾ-2 ರವರು ಫೋನ್ ಮೂಲಕ ತಿಳಿಸಿದ್ದು ನಾನು ಮರುದಿನ ಅಲ್ಲಿಗೆ ಬಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಆರೋಪಿಗಳನ್ನು ವಿಚಾರಿಸಲಾಗಿ ನನಗೆ ಅವಾಚ್ಯ ಶಬ್ದಗಳಿದ

ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರವೂ ಆರೋಪಿಗಳು ಕೊಠಡಿಗಳನ್ನು ಕಾಲಿ ಮಾಡದ ಕಾರಣ ದಿ.16.02.2021 ರಂದು ಪೋಲಿಸ್ ದೂರು ನೀಡಿರುತ್ತೇನೆ. ನಾನು ನೀಡಿದ ದೂರು ಮತ್ತು ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ-1 ಮತ್ತು 1(ಎ) ಎಂದು ಗುರುತಿಸಲಾಯಿತು.

2. ಪೋಲಿಸರು ದಿ.19.02.2021 ರಂದು ಬೆಳಿಗ್ಗೆ 10-11 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆ ಮಾಡಿ ಮರದ ಟೇಬಲ್, ಚೇರುಗಳು, ಪ್ಲಾಸ್ಟಿಕ್ ಟೇಬಲ್ ಚೇರುಗಳು, ಅಲುಮೀನಿಯಮ್ ಪಾತ್ರೆಗಳು, ಊಟದ ತಟ್ಟೆಗಳು, ಪ್ಲಾಸ್ಟಿಕ್ ತಟ್ಟೆಗಳು, ಇಡ್ಲಿ ಕುಕ್ಕರ್, ಕಾಫಿ ಪಾತ್ರೆ ಇವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಛಾಯ ಚಿತ್ರ ತೆಗೆದಿರುತ್ತಾರೆ. ಪಂಚನಾಮೆ ಮತ್ತು ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ನಿಪಿ-2 ಮತ್ತು 2(ಎ) ಎಂದು ಗುರುತಿಸಲಾಯಿತು. ಛಾಯ ಚಿತ್ರಗಳನ್ನು ನೋಡಿ ಗುರುತಿಸುತ್ತಿದ್ದೇನೆ ಅವುಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು. ಈ ಬಗ್ಗೆ ದಿ.16.02.2021 ರಂದು ಮರುಹೇಳಿಕೆ ನೀಡಿರುತ್ತೇನೆ. ಆರೋಪಿಗಳನ್ನು ಗುರುತಿಸುತ್ತಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ 2 ಪರ ಶ್ರೀ ಎಸ್ ಆರ್ ಜೆ ವಕೀಲರಿಂದಃ</u>**

3. ನಾನು ಕೋಟಿಲಿಂಗೇಶ್ವರ ದೇವಸ್ಥಾನದ ಆಡಳಿತ ಅಧಿಕಾರಿ ಎಂದು ತೋರಿಸಲು ಈ ಪ್ರಕರಣದಲ್ಲಿ ದಾಖಲೆಗಳನ್ನು ನೀಡಿದ್ದೇನೆ. ನಾನು ಕೋಟಿಲಿಂಗೇಶ್ವರ ದೇವಸ್ಥಾನದ ಆಡಳಿತ ಅಧಿಕಾರಿ ಅಲ್ಲ ಮತ್ತು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಚಾಸಾ-2 ಮತ್ತು 3 ರವರು ನನಗೆ ದಿ.13.02.2021 ರಂದು ಘಟನೆಯ ಬಗ್ಗೆ ಪೋನ್ ಮೂಲಕ ತಿಳಿಸಿದ್ದರು ಎಂದು ನಾನು ನೀಡಿರುವ ದೂರನಲ್ಲಿ ಹೇಳಿದ್ದೇನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. ರಾತ್ರಿ 8 ಗಂಟೆ ಸಮಯದಲ್ಲಿ ಅವರು ನನಗೆ ವಿಚಾರವನ್ನು ತಿಳಿಸಿದ್ದರು. ಚಾಸಾ-2 ರಿಂದ

5 ರವರಿಗೆ ಆರೋಪಿಗಳು ದಿ.13.02.2021 ರಂದು ಬೈದಿದ್ದರು ಅನ್ನುವ ವಿಚಾರವನ್ನು ನಾನು ದೂರಿನಲ್ಲಿ ಹೇಳಿಲ್ಲ.

4. ನಾನು ಸಾಮಾನ್ಯವಾಗಿ ಮನೆಯಿಂದ ಹೊರಗೆ ಹೋದರೆ ನನ್ನ ಅಂಗ ರಕ್ಷಕರು ಇರುತ್ತಾರೆ ಅನ್ನುವುದು ಸರಿ, ಆ ದಿನ ಅಂಗ ರಕ್ಷಕರು ಇರಲಿಲ್ಲ. ನಾನು 14.02.2021 ರಂದು ಬೆಳಿಗ್ಗೆ 8 ಗಂಟೆಗೆ ಬಂದಾಗ ಆರೋಪಿಗಳು ಮತ್ತು ಇನ್ನೂ 4 ಜನ ಇದ್ದರು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಕೋಟಿಲಿಂಗೇಶ್ವರ ದೇವಸ್ಥಾನ ಶಿವಪ್ರಸಾದ್ ರವರ ಮಾಲಿಕತ್ವಕ್ಕೆ ಸೇರಿದೆ ಅನ್ನುವುದು ಸರಿಯಲ್ಲ. ಈ ದೇವಸ್ಥಾನ ಶಿವಪ್ರಸಾದ್ ರವರ ತಂದೆಗೆ ಸೇರಿತ್ತು ಅನ್ನುವುದು ಸರಿ. ಈಗಲೂ ಶಿವಪ್ರಸಾದ್ ಈ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದಾರೆ ಅನ್ನುವುದು ಸುಳ್ಳು. 2 ನೇ ಆರೋಪಿಯು ಶಿವಪ್ರಸಾದ್ ರವರ ಬಳಿ ಮ್ಯಾನೇಜರ್ ಆಗಿದ್ದು ದೇವಸ್ಥಾನ ಮತ್ತು ಆಸ್ಪತ್ರೆಯನ್ನು ನೋಡಿಕೊಳ್ಳುತ್ತಿದ್ದಾರೆ ಅನ್ನುವುದು ಸುಳ್ಳು.

5. ನನ್ನ ಮತ್ತು ಶಿವಪ್ರಸಾದ್ ರವರ ನಡುವೆ ಕೆ.ಜಿ.ಎಫ್. ನ್ಯಾಯಾಲಯಗಳಲ್ಲಿ ಸುಮಾರು 50-60 ಪ್ರಕರಣಗಳು ನಡೆಯುತ್ತಿವೆ ಅನ್ನುವುದು ಸರಿ. ಪ್ರಕರಣಗಳು ದಾಖಲಾದ ದಿನಗಳಿಂದ ನನ್ನ ಮತ್ತು ಶಿವಪ್ರಸಾದ್ ರವರ ನಡುವೆ ವೈಮಸ್ಸು ಇದೆ ಅನ್ನುವುದು ಸರಿಯಲ್ಲ. 2 ನೇ ಆರೋಪಿಯು ಶಿವಪ್ರಸಾದ್ ರವರ ಬಳಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವುದರಿಂದ ನನಗೆ ಮನಸ್ತಾಪ ಇಲ್ಲ ಆದರೆ ಅವರು ನನಗೆ 5-6 ವರ್ಷಗಳಿಂದ ತೊಂದರೆ ನೀಡುತ್ತಿದ್ದಾರೆ. ದಿ.14.02.2021 ರಂದು ನಡೆದ ಘಟನೆಯ ನಂತರ ಕೆಲವರು ಇಬ್ಬರಿಗೂ ಸಮಾಧಾನ ಹೇಳಿ ಮಾತುಕತೆ ಮಾಡೋಣ ಎಂದು ಹೇಳಿದ್ದರಿಂದ ದೂರು ನೀಡಲಿಲ್ಲ, ನಂತರ ಅವರು ನಾನು ದಾರಿಯಲ್ಲಿ ಹೋಗುತ್ತಿರುವಾಗ ಬೈಯುತ್ತಿದ್ದರಿಂದ ಮತ್ತು ವಿಡಿಯೋ ಮಾಡುತ್ತಿದ್ದರಿಂದ ದಿ.16.02.2021 ರಂದು ದೂರು ನೀಡಿದ್ದೇನೆ.

6. ಬೇರೆಯವರು ಮಾತುಕತೆ ಮಾಡೋಣ ಎಂದು ಹೇಳಿರುವ ವಿಚಾರ, ನಾನು ದಾರಿಯಲ್ಲಿ ಹೋಗುವಾಗ ಆರೋಪಿಗಳು ಬೈಯುತ್ತಿದ್ದ ವಿಚಾರ ಮತ್ತು ವಿಡಿಯೋ ಮಾಡಿದ್ದ ವಿಚಾರವನ್ನು ನನ್ನ ದೂರು ಮತ್ತು ಮರುಹೇಳಿಕೆಯಲ್ಲಿ ತಿಳಿಸಿಲ್ಲ. ಈ ರೀತಿ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ.

7. ಪೋಲೀಸರು ಪಂಚನಾಮೆಗೆ ಬಂದಿದ್ದಾಗ ಸುಮಾರು ಜನ ಇದ್ದರು, ಎಷ್ಟು ಜನ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪಂಚನಾಮೆ ಮಾಡಿದ ಚೆಕ್ಕುಬಂದಿ ಪೂರ್ವಕ್ಕೆ ನೀರಿನ ಟ್ಯಾಂಕ್, ಪಶ್ಚಿಮಕ್ಕೆ ದೇವಸ್ಥಾನದ ಅಂಗಡಿ, ಉತ್ತರಕ್ಕೆ ಇಂದಿರಮ್ಮ ಇವರ ಕಾಲಿ ಜಮೀನು ಮತ್ತು ದಕ್ಷಿಣಕ್ಕೆ ದೇವಸ್ಥಾನದ ಪಾರ್ಕಿಂಗ್ ಜಾಗ ಇದೆ. ಪಂಚನಾಮೆಗೆ ನನ್ನನ್ನು ಹೊರತು ಪಡಿಸಿ ಚಲಪತಿ, ಜಾವಿದ್ ಶರೀಷ್ ಮತ್ತು ಜಗನಾಥ್ ಸಹಿ ಮಾಡಿದ್ದಾರೆ. ಇವರು ನನ್ನ ಬಳಿ ಕೆಲಸ ಮಾಡುತ್ತಿದ್ದಾರೆ ಮತ್ತು ಪರಿಚಿತರು ಅನ್ನುವುದು ಸರಿಯಲ್ಲ. ಪೋಲಿಸರು ಆ ದಿನ ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಅನ್ನುವುದು ಸರಿಯಲ್ಲ. ಪಂಚನಾಮೆಯನ್ನು ಪೋಲಿಸ್ ಠಾಣೆಯನ್ನು ತಯಾರಿಸಿ ಸಹಿಗಳನ್ನು ಪಡೆಯಲಾಗಿದೆ ಅನ್ನುವುದು ಸರಿಯಲ್ಲ. ನಾನು ಮೇಲೆ ಹೇಳಿದ ಯಾವುದೇ ಸಾಮಾನುಗಳು 2 ನೇ ಆರೋಪಿಗಳಿಗೆ ಸೇರಿಲ್ಲ ಅಂದರೆ ಇಬ್ಬರೂ ಆರೋಪಿಗಳ ಪೈಕಿ ಯಾರಿಗೆ ಸೇರಿದೆ ಎಂದು ಹೇಳಲು ಆಗುವುದಿಲ್ಲ.

8. ಮರುಹೇಳಿಕೆಯನ್ನು ಪೋಲಿಸ್ ಠಾಣೆಯಲ್ಲಿ ದಿ.16 ನೇ ತಾರೀಖು ನೀಡಿದ್ದೇನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. 13 ನೇ ತಾರೀಖು ಆರೋಪಿಗಳು ಚಾಸಾ–2 ರಿಂದ 5 ರೊಂದಿಗೆ ಯಾವುದೇ ಗಲಾಟೆ ಮಾಡಿಲ್ಲ ಅನ್ನುವುದು ಸರಿಯಲ್ಲ. 14 ನೇ ತಾರೀಖು 2 ನೇ ಆರೋಪಿಯು ನಾನು ಹೇಳಿದಂತೆ ಆ ಸ್ಥಳದಲ್ಲಿ ಇರಲ್ಲಿ ಮತ್ತು ನಾನು ಹೇಳಿದಂತೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಅನ್ನುವುದು ಸರಿಯಲ್ಲ. 2 ನೇ ಆರೋಪಿಯು ಶಿವಪ್ರಸಾದ್ ರವರ ಬಳಿ ಕೆಲಸ ಮಾಡುತ್ತಿರುವುದರಿಂದ ಮತ್ತು ನನ್ನ ಮತ್ತು ಶಿವಪ್ರಸಾದ್ ರವರ

ನಡುವೆ ಮನಸ್ತಾಪ ಇರುವುದರಿಂದ 2 ನೇ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೆನೆ ಅನ್ನುವುದು ಸರಿಯಲ್ಲ. 2 ನೇ ಆರೋಪಿ ಯಾವುದೇ ನಷ್ಟ ಉಂಟು ಮಾಡಿಲ್ಲ ಅನ್ನುವುದು ಸುಳ್ಳು. 2 ನೇ ಆರೋಪಿಯು ಯಾವುದೇ ತಪ್ಪು ಮಾಡದಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ.

1 ನೇ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಾಯಾವಕಾಶ ಕೋರಿದ್ದು ಸೂಕ್ತ ಕಾರಣ ನೀಡಿಲ್ಲ, ಆದ್ದರಿಂದ ಮನವಿಯನ್ನು ತಿರಿಸ್ಕರಿಸಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಕೆ. ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್